1019

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 25.

ಬೆಂಗಳೂರು, ಗುರುವಾರ, ಜೂನ್ ತಾ॥ 23, ಸನ್ 1904.

IIನ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳು ಮೆಗ್ಗೆ ಕೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಡಿ. ನಂಬರು 61ನೆ ಪ್ರಕಟನ ಪತ್ರಿಕೆ, ಸನ್ 1904ನೆಯ ಇಸವಿ ಜೂನ್ ತಾರೀಖು 20.

ಮೈಸೂರು ಲೋವರ್ ಸಕಂಡರಿ ಪರೀಕ್ಷೆ.

ಸನ್ 1903ನೆಯ ಇಸವಿ ಜನವರಿ 29ನೆ ತಾರೀಖು ಮೈಸೂರು ಗೆಜೆಟ್ಟಿನ 2ನೆ ಭಾಗದ 43ನೆ ಪುಟದಲ್ಲಿ ಪ್ರಕಟನಲ್ಪಟ್ಟಿರುವ ಸನ್ 1902ನೆ ಇಸವಿ ಡಿಸೆಂಬರು 22ನೆ ತಾರೀಖಿನ ಡಿ. ನಂಬರು 49ನೆ ಪ್ರಕಟನ ಪತ್ರಿಕೆಯಲ್ಲಿ ಸಂಸ್ಕೃತ-ಎರಡನೆಯ ಭಾಷೆ-"ವಿಕ್ರಮಾರ್ಕ ಚರಿತೆ (ಮೈಸೂರು ಇಲಾಖೆಯ ಭಾಷೆ) – 2ನೆಯ ಕಥೆಯಿಂದ ಕಡೆಯ ವರೆಗೆ" ಎಂದು ಬರದಿರುತ್ತೆ. ಇದಕ್ಕೆ ಬದಲಾಗಿ "ವಿಕ್ರಮಾರ್ಕ ಚರಿತೆ, 28ನೆಯ ಕಥೆಯಿಂದ 32ನೆಯ ಕಥೆ ವರಗೆ ಮತ್ತು ಪಂಚತಂತ್ರದಲ್ಲಿ 6 ಕಥೆಗಳು (ಇಲಾಖೆಯ ಭಾಷೆ)" ಎಂದು ಓದಬೇಕು.

ಹರ್ಬ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ ನಂ. 413.

ತಾರೀಖು 20ನೆ ಜೂನ್ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟು ಮಾಲೂರು ರೇಂಜು ಫಾರೆಸ್ಟ್‌ಬೀಟ್‌ಗಳಲ್ಲಿ ಈ ಕೆಳಗೆ ನಮೂದಿಸಿರುವ ತಪಶೀಲು ವಾರು 4 ಅಡಿ ತಾಂಡುಗಳು ಆಗಿ ಕೊಯಿದು ಲಾಟು ಕಟ್ಟಿರುವ ಹಳೇ ಮತ್ತು ಹೊಸ ಕ್ಯಾಸರಿನ ಸವುದೆ 1904ನೆ ಇಸವಿ ಜೂನ್ 27ನೆ ಸೋಮವಾರ ಮಧ್ಯಾನ್ಹ 2 ಘಂಟೆಗೆ ಮಾಲೂರು ಮುಸಾಫರ್ ಬಂಗ್ಲೆ ಬಳಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಒಹಿರಂಗವಾದ ಹರಾಜು ಮಾಡಲ್ಪಡುತ್ತೆ.—

ಫಾರೆಸ್ಟ್‌ಬೀಟ್ ಹೆಸರು ಅ ಥವಾ ಸ್ಥಳ.	ಬಿಕರಿಆಗುವ ಸ್ಥಳಕ್ಕೆ ಯಾ ನೇಮಿಸುವ ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಸುಮಾರು ಸವುದೆ ಮೊತ್ತ ಟನ್‌ಗಳು.	ಷರಾ.
ಬೈಯಪ್ಪನಹಳ್ಳಿ ..	5 ಮೈಲಿ ಕೋಲಾರಕ್ಕೆ 16 ,, ಬವರಿಂಗಪೇಟೆಗೆ	20	68 ಸಲೆ ಅಡಿಗೆ ಒಂದು ಟನ್ ನಂತೆ ಭಾವಿಸತಕ್ಕದ್ದು.
ಯಕವಂತಪುರ ...	16 ,, ಮಾಲೂರಿಗೆ	40	
ಲಕ್ಷ್ಮಿಸಾಗರ ...	10 ,, ಡಿಟೋ	123 + 5	ಹಳೇದು ಮತ್ತು ಹೊಸದು.
ವಕ್ಕಲೇರಿ ...	5 ,, ತ್ಯಾಕಲ್ಲಿಗೆ ...	60 + 15	ಡಿಟೋ
ಮುಲ್ಲಪ್ಪನಹಳ್ಳಿ ...	4 ,, ಮಾಲೂರಿಗೆ ..	15	
ರಾಮಚಂದ್ರಪುರ ...	4 ,, ಡಿಟೋ .	5	
ಹೊಸಕುರಂಡಹಳ್ಳಿ .	4 ,, ಡಿಟೋ	49½	
ಕಾಡುಮುತ್ಸಂದ್ರ ..	8 ,, ಡಿಟೋ	5	
ಫಾರೆಸ್ಟ್‌ಲಾಡ್ಜ್ ..	¼ ,, ಡಿಟೋ	1¼	
ಜಮ್ಮಾ ..		335¾	